**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 17 ಇಎಸ್‌ಟಿ(8) 2024

**ಆಯುಕ್ತರ ಕಛೇರಿ**,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001,
ದಿನಾಂಕ: 09-08-2024.

## ಅಧಿಸೂಚನೆ

ವಿಷಯ: 2024-25 ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿನಾಂಕ:29-01-2021 ಮತ್ತು 29-06-2021.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿ:10-06-2024.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 98 ಡಿಟಿಇ 2024 ದಿನಾಂಕ: 04-07-2024.
4. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿನಾಂಕ: 05-07-2024.
5. ಈ ಕಛೇರಿ ಪತ್ರ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿ:16-07-2024 ಮತ್ತು 23-07-2024.
6. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿನಾಂಕ: 26-07-2024.
7. ಸರ್ಕಾರದ ಪತ್ರ ಸಂಖ್ಯೆ: ಇಡಿ 100 ಡಿಟಿಇ 2024 ದಿನಾಂಕ: 31-07-2024.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 98 ಡಿಟಿಇ 2024 ದಿನಾಂಕ: 07-08-2024.
9. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 26 ಸೇನೌವ 2022 ದಿನಾಂಕ:12-06-2024
10. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 17 ಇಎಸ್‌ಟಿ (8) 2024 ದಿನಾಂಕ: 08-08-2024.

-------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರ ವರ್ಗಾವಣೆಗಳನ್ನು ನಿಯಂತ್ರಿಸುವ ಸಲುವಾಗಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ಅನ್ನು ದಿನಾಂಕ: 29-01-2021 ರಿಂದ ಜಾರಿಗೆ ತರಲಾಗಿರುತ್ತದೆ.

ಉಲ್ಲೇಖ (3) ರ ಅಧಿಸೂಚನೆ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2021 ರ ನಿಯಮ 8 ರನ್ವಯ ಬೋಧಕ ವರ್ಗಾವಣೆಯನ್ನು ದಿನಾಂಕ:31-07-2024 ರ ಒಳಗಾಗಿ ಪೂರ್ಣಗೊಳಿಸಲು ತಿಳಿಸಲಾದ ಆದೇಶವನ್ನು ಮಾರ್ಪಡಿಸಿ ಉಲ್ಲೇಖ (8) ರ ಅಧಿಸೂಚನೆಯಲ್ಲಿ 2024-25 ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕ ಸಿಬ್ಬಂದಿಗಳ ವರ್ಗಾವಣೆ ಪ್ರಕ್ರಿಯೆಯನ್ನು ದಿನಾಂಕ: 15-08-2024 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಈ ಹಿನ್ನಲೆಯಲ್ಲಿ, ಈ ವರ್ಗಾವಣೆ ನಿಯಮಗಳಲ್ಲಿ ಕಲ್ಪಿಸಲಾಗಿರುವ ಅವಕಾಶದಂತೆ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ವರ್ಗದವರು ದಿನಾಂಕ: 09-08-2024 ರಂದು ನಡೆದ ವರ್ಗಾವಣೆ ಕೌನ್ಸಿಲಿಂಗ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ/ವಿಶೇಷ ಪ್ರಕರಣಗಳಡಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ತತ್ಸಂಬಂಧ ಅನುಬಂಧದಲ್ಲಿ ನೀಡಿರುವಂತೆ ಬೋಧಕರ ಹೆಸರಿನ ಮುಂದೆ ನಮೂದಿಸಿರುವ ಸಂಸ್ಥೆಗೆ ವರ್ಗಾಯಿಸಿ ಆದೇಶಿಸಿದೆ

ಸೂಚನೆ:

1. ವರ್ಗಾವಣೆಗೊಂಡ ಬೋಧಕ ವರ್ಗದವರನ್ನು ದಿನಾಂಕ: 10-08-2024 ರ ಅಪರಾಹ್ನ ಸಂಸ್ಥೆಯ ಕರ್ತವ್ಯದಿಂದ ನೇರವಾಗಿ ಬಿಡುಗಡೆಗೊಳಿಸಲಾಗಿದೆ ಹಾಗೂ ವರ್ಗಾವಣೆ ಆದೇಶದ ಪ್ರತಿಯೊಂದಿಗೆ ವರ್ಗಾವಣೆಗೊಂಡ ಸಂಸ್ಥೆಗೆ ವರದಿ ಮಾಡಿಕೊಳ್ಳಲು ಆದೇಶಿಸಲಾಗಿದೆ;
2. ಸಾರ್ವಜನಿಕ ಹಿತದೃಷ್ಟಿ ಮೇರೆಗೆ ವರ್ಗಾವಣೆಗೊಂಡ ಬೋಧಕ ವರ್ಗದವರು ಕೆ.ಸಿ.ಎಸ್.ಆರ್ ನಿಯಮಗಳಂತೆ ನಿಯಮಾನುಸಾರ ಅನ್ವಯವಾಗುವ ಸೇರಿಕೆ ಕಾಲ ಹಾಗೂ ವರ್ಗಾವಣೆ ಭತ್ಯೆಗೆ ಅರ್ಹರಿರುತ್ತಾರೆ;
3. ಕೋರಿಕೆ ಮೇರೆಗೆ ವರ್ಗಾವಣೆಗೊಂಡ ಬೋಧಕ ವರ್ಗದವರು ಸೇರಿಕೆ ಕಾಲ ಮತ್ತು ವರ್ಗಾವಣೆ ಭತ್ಯೆಗೆ ಅರ್ಹರಿರುವುದಿಲ್ಲ;
4. ವರ್ಗಾವಣೆ ಹೊಂದಿದ ಬೋಧಕ ವರ್ಗದವರು ಆಗಸ್ಟ ಮಾಹೆಯ ದಿನಾಂಕ:10-08-2024 ರಿಂದ ನಂತರದ ವೇತನ ಭತ್ಯೆಯನ್ನು ಅವರನ್ನು ವರ್ಗಾಯಿಸಿದ ಸಂಸ್ಥೆಯಲ್ಲಿ ಪಡೆಯತಕ್ಕದ್ದು;
5. ವರ್ಗಾವಣೆ ಹೊಂದುವ ಬೋಧಕ ವರ್ಗದವರು ಸಂಸ್ಥೆಯ ಪ್ರಾಂಶುಪಾಲರ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಲ್ಲಿ, ಸಂಸ್ಥೆಯ ಹಿರಿಯ ಬೋಧಕ ವರ್ಗದವರಿಗೆ ಪ್ರಾಂಶುಪಾಲರ ಕಾರ್ಯಭಾರವನ್ನು ವಹಿಸಿಕೊಡತಕ್ಕದ್ದು.

**ಟಿಪ್ಪಣಿ ಮಾನ್ಯ ಆಯುಕ್ತರಿಂದ**
**ಅನುಮೋದಿಸಿದೆ**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಮೇಲ್ಕಂಡ ಬೋಧಕ ವರ್ಗದವರಿಗೆ ಸಂಬಂಧಪಟ್ಟ ಪ್ರಾಂಶುಪಾಲರ/ಅಧಿಕಾರಿಗಳ ಮೂಲಕ ಪ್ರತಿ.
2. ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ;
2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು – ಮಾಹಿತಿಗಾಗಿ;
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ಜಂಟಿ ನಿರ್ದೇಶಕರು (ಆಡಳಿತ)/(ಸಿಡಿಸಿ)/(ತನಿಖೆ)/(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಆಡಳಿತಾಧಿಕಾರಿ / ರಿಜಿಸ್ಟ್ರಾರ್(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
6. ಇ- ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು);
7. ಡಿವಿಪಿ (1) ಮತ್ತು (2), ಇಎಸ್‌ಟಿ (1), (3), (5), (7), (9) ಮತ್ತು (10) ವಿಭಾಗಗಳಿಗೆ.
8. ಆಯುಕ್ತರ ಆಪ್ತ ಶಾಖೆಗೆ;
9. ಕಛೇರಿ ಪ್ರತಿ.

## ಅನುಬಂಧ

2024-25ನೇ ಸಾಲಿನ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಹೊಂದಿದ ಬೋಧಕ ವರ್ಗದವರ ಪಟ್ಟಿ

| Sl. No. | KGID | NAME | DISCIPLINE/ CADRE | PRESENT WORKING COLLEGE | HK/RK | TRANSFERD COLLEGE | REMARKS |
|---|---|---|---|---|---|---|---|
| 1 | 1670514 | KUPENDRA O | ENGLISH | Government Junior Technical School,Hubballi | N | Government Junior Technical School ,Bhadravathi | REQUEST |
| 2 | 1916687 | NAMITHA C | SCIENCE | Government Junior Technical School,Hubballi | N | Government Junior Technical School ,Bhadravathi | REQUEST |
| 3 | 2547439 | NASSER ASAD D | MECHANICAL ENGINEERING | Government Junior Technical School,Kalaburagi | N | Government Junior Technical School ,Bhadravathi | PUBLIC |

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ